# ಶೂನ್ಯ ಮೈಲಿಗಲ್ಲು



ಮಹಾರಾಷ್ಟ್ರದ ನಾಗಪುರ ಪಟ್ಟಣದ ಮಧ್ಯದಲ್ಲಿ ಒಂದು ತಾಣ ಶೂನ್ಯ ಮೈಲು ತೋರಿಸುವ ಗುರುತು ಹೊಂದಿದೆ. ಅಂದರೆ ಇದು ಭಾರತ ದೇಶದ ನಟ್ಟ ನಡುವಿನ ಕೇಂದ್ರ ಬಿಂದು. ಬ್ರಿಟಿಷ್ (ಅಖಂಡ) ಭಾರತದ ಭೌಗೋಳಿಕ ಕೇಂದ್ರ ಸ್ಥಾನವೆಂದು ಇದನ್ನು ತೋರಿಸಲು ಒಂದು ಇಪ್ಪತ್ತು ಅಡಿ ಎತ್ತರದ ಸ್ತಂಭವನ್ನು ನಿಲ್ಲಿಸಿದ್ದಾರೆ. ಇಲ್ಲಿಂದ ಪ್ರಮುಖ ಪಟ್ಟಣಗಳಾದ ಉತ್ತರದ ದೆಹಲಿ 1030 ಕಿ.ಮೀ., ದಕ್ಷಿಣದ ಚೆನ್ನೈ 1118 ಕಿ.ಮೀ., ಪೂರ್ವದ ಕೊಲ್ಕೊತ್ತಾ 1117 ಕಿ.ಮೀ. ಹಾಗೂ ಪಶ್ಚಿಮದ ರಾಜಕೋಟ 1050 ಕಿ.ಮೀ. ದೂರದಲ್ಲಿವೆ. ಈ ಕಾರಣಕ್ಕಾಗಿಯೇ ಬ್ರಿಟಿಷರು ನಾಗಪುರಕ್ಕೆ ದೇಶದ ಎರಡನೆಯ ರಾಜಧಾನಿಯ ಸ್ಥಾನ ಕೊಟ್ಟಿದ್ದರು.

**-ಗಂಗಾ ಆರ್.ಭಟ್ಟ, ಬೆಳಗಾವಿ**



# ಚಂದ್ರ ಬಿಂಬ

ಚಂದ್ರ ಗ್ರಹಣ ಸಂಭವಿಸಿದಾಗ ಕೆಲವರು ಅಕ್ಕಿಯೊಂದಿಗೆ ಚಂದ್ರಬಿಂಬವನ್ನು ದಾನ ಮಾಡುವ ರೂಢಿ ಇಟ್ಟುಕೊಂಡಿದ್ದಾರೆ. ಬೆಳ್ಳಿ ಅಥವಾ ಮಿಶ್ರಲೋಹದ ಚಂದ್ರ ಬಿಂಬವನ್ನು ತಲೆ ಮೇಲೆ ಇಟ್ಟುಕೊಂಡು ಸ್ನಾನ ಮಾಡಿ ನಂತರ ದಾನ ಕೊಡುತ್ತಾರೆ. ಬಹಳ ಹಿಂದಿನ ಈ ಸಂಪ್ರದಾಯವನ್ನು ಈಗಲೂ ಅಲ್ಲಲ್ಲಿ ಕಾಣಬಹುದು.

**-ಎಸ್.ಎನ್.ಮಹಾಬಲರಾವ್, ನರಸಿಂಹರಾಜಪುರ**

# 1945ರ ಮತ ಪತ್ರ

ತುಮಕೂರು ಜಿಲ್ಲೆ ಶಿರಾ ತಾಲ್ಲೂಕು ಗುಳಿಗೇನಹಳ್ಳಿಯ ಕೆ. ರಂಗಣ್ಣನವರು 1945ರಲ್ಲಿ ಚುನಾವಣೆಗೆ ಸ್ಪರ್ಧಿಸಿದ ಬಗ್ಗೆ ಮಾಡಿಸಿದ್ದ ಕರಪತ್ರವಿದು. 17–2–1945ರಲ್ಲಿ ಪ್ರಜಾ ಪ್ರತಿನಿಧಿ ಸಭೆಯ ಚುನಾವಣೆ ಬಗ್ಗೆ ಇದರಲ್ಲಿ ಉಲ್ಲೇಖವಿದೆ. ಇದನ್ನು ಅವರ ಮೊಮ್ಮಗ ಪವನ್ ರಾಜ್ ತಮ್ಮ ಫೇಸ್ ಬುಕ್ ಖಾತೆಯಲ್ಲಿ ಹಂಚಿಕೊಂಡಿದ್ದಾರೆ.

**-ಎನ್.ಎಸ್. ಅಶ್ವಿನಿ, ಚಿತ್ರದುರ್ಗ**


ತಾರೀಖು 17-2-45

3 | ಕೆ. ರಂಗಣ್ಣ | X

X (ಕತ್ತರಿ)

ಹಾಕಬೇಕಾಗಿ ಕೋರುತ್ತೇನೆ.